ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ.ನಂ. 2292/2013

ಸರ್ಕಾರದ ಪರ ಕುಂದಾಪುರ ಠಾಣಾ ಪೋಲೀಸರು .... ಪಿರ್ಯಾದುದಾರರು

ಃ ವಿರುದ್ಧ ಃ

1. ಕೃಷ್ಣ, 25 ವರ್ಷ,
ತಂದೆಃ ದಿ. ಸದಿಯ,
ವಾಸಃ ಬಳಗೇರಿ ಗುಡ್ಡಿಮನೆ ಅತ್ರಾಡಿ,
ವಂಡ್ಸೆ ಗ್ರಾಮ, ಕುಂದಾಪುರ ತಾಲೂಕು.

2. ಶೇಖರ, 19 ವರ್ಷ,
ತಂದೆಃ ಮುತ್ತ,
ವಾಸಃ ಮುಳ್ಳುಕುಂಟ ಕಟ್ಬಬೆಲ್ತೂರು ಗ್ರಾಮ,
ಕುಂದಾಪುರ ತಾಲೂಕು.

3. ಅಣ್ಣಪ್ಪ, 21 ವರ್ಷ,
ತಂದೆಃ ಶನಿಯ,
ವಾಸಃ ಮಲ್ಲಗದ್ದೆ ಮನೆ ಹತ್ತಿರ,
ಕೆಂಚನೂರು ಗ್ರಾಮ, ಕುಂದಾಪುರ ತಾಲೂಕು.
ಹಾಲಿ ವಾಸಃ
ದೊಡ್ಡಮನೆ ಹತ್ತಿರ, ಮೂಡ್ಲಕಟ್ಟೆ,
ಕಂದಾವರ ಗ್ರಾಮ, ಕುಂದಾಪುರ ತಾಲೂಕು.

4. ಎಮ್ ಇಲಿಯಾಸ್, 42 ವರ್ಷ,
ತಂದೆಃ ಕುಂಞ್ಞಿ ಅಹಮ್ಮದ್,
ವಾಸಃ ಬದ್ರಿಯಾ ಜುಮ್ಮಾ ಮಸೀದಿಯ ಬಳಿ
ಕೋಡಿ, ಕಸಬಾ ಗ್ರಾಮ, ಕುಂದಾಪುರ ತಾಲೂಕು. ..... ಆರೋಪಿತರು

## ದೋಷಾರೋಪಣೆ

ಶ್ರೀ ಶ್ರೀಕಂಠ ಎನ್. ಎ., ಬಿ.ಎ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆಃ

ದಿ. 18.07.2013 ರಂದು ರಾತ್ರಿ ಸಮಯ 1 ರಿಂದ 3ನೇ ಆರೋಪಿತರಾದ ನೀವುಗಳು ಅಪ್ರಾಮಾಣಿಕ ಉದ್ದೇಶದಿಂದ ಕುಂದಾಪುರ ತಾಲೂಕಿನ ಕಟ್ಬ ಬೆಲ್ತೂರು ಗ್ರಾಮದ ಕಟ್ಬಬೆಲ್ತೂರು ಹಾಲು ಉತ್ಪಾದಕರ ಸಹಕಾರ ಸಂಘದ ಎದುರುಗಡೆ ಕುಂದಾಪುರ ಕೊಲ್ಲೂರು ರಾಜ್ಯ ಹೆದ್ದಾರಿಯ ಬದಿಯಲ್ಲಿ ಹಾಕಿದ ಟೆಲಿಫೋನ್ ಕಂಬದಿಂದ ಸುಮಾರು 17,500/- ರೂ. ಮೌಲ್ಯದ 250 ಮೀಟರ್ ಟೆಲಿಫೋನ್ ಕೇಬಲನ್ನು ನಿಮ್ಮ ಸಂತ ಲಾಭಕ್ಕೋಸ್ಕರ

ಕಳವು ಮಾಡಿದ್ದು ಆ ಮೂಲಕ 1 ರಿಂದ 3ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 379 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

2. 1 ರಿಂದ 3 ನೇ ಆರೋಪಿತರು ಕಳವು ಮಾಡಿದ ಟೆಲಿಫೋನ್ ಕೇಬಲ್‌ನ್ನು ಸುಟ್ಟು ಅದರ ಒಳಗಿನ ತಾಮ್ರದ ತಂತಿಯನ್ನು ಮಾರಾಟ ಮಾಡಲು ಬಂದಾಗ 4ನೇ ಆಪಾದಿತರಾದ ನೀವು ಅದು ಕಳವು ಮಾಡಿದ ಟೆಲಿಫೋನ್ ಕೇಬಲ್ ತಂತಿ ಎಂದು ತಿಳಿದಿದ್ದರೂ ಸಹ ಅದನ್ನು1 ರಿಂದ 3 ನೇ ಆರೋಪಿತರಿಂದ ಖರೀದಿ ಮಾಡಿದ್ದು ಆ ಮೂಲಕ 4ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 411 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

3. ದಿ. 19.07.2013 ರಂದು ರಾತ್ರಿ 10.30 ಗಂಟೆಗೆ 1ನೇ ಆರೋಪಿತರಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಕುಂದಾಪುರ ತಾಲೂಕಿನ ತಲ್ಲೂರು ಗ್ರಾಮದ ಕೋಟೆಬಾಗಿಲು 5 ಸೆಂಟ್ಸು ಎಂಬಲ್ಲಿ ಸಾಕ್ಷಿ 3ನೇಯವರ ಮನೆಯ ಬಾಗಿಲನ್ನು ತಳ್ಳಿ ಒಳಗೆ ಪ್ರವೇಶ ಮಾಡಿದ್ದು ಆ ಮೂಲಕ 1ನೇ ಅರೊಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 457 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1ನೇ ಆರೋಪಿತರಾದ ನೀವು ಅಪ್ರಾಮಾಣಿಕ ಉದ್ದೇಶದಿಂದ ಸಾಕ್ಷಿ 3ನೇಯವರ ಮನೆಯ ಒಳಗೆ ಪ್ರವೇಶ ಮಾಡಿ ಸುಮಾರು 2100/- ರೂ. ಮೌಲ್ಯದ INTEX ಮೊಬೈಲ್ ಫೋನ್-1, ಮೊಬೈಲ್ ಚಾರ್ಜರ್-1, ಒಂದು ಕಪ್ಪು ಪರ್ಸ್, SAMSUNG ಕಂಪೆನಿಯ ಮೊಬೈಲ್ ಬ್ಯಾಟರಿ-1, ಮಂಗಳ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ. ಇದರಲ್ಲಿ 5873 ನೇ ಖಾತೆ ನಂಬ್ರಕ್ಕೆ ಶಶಿಕಲಾ ಇವರ ಹೆಸರಿಗೆ ಹಣ ಕಟ್ಟಿದ ರಶೀದಿ-5, ನಗದು ಹಣ 20/-, ಚಾರ್ಜರ್ ಟಾರ್ಚ್-1, ಆಕಾಶ ನೀಲಿ ಬಣ್ಣದ ಕೊಡೆ-1 ನ್ನು ನಿಮ್ಮ ಸ್ವಂತ ಲಾಭಕ್ಕೋಸ್ಕರ ಕಳವು ಮಾಡಿದ್ದು ಆ ಮೂಲಕ 1ನೇ ಅರೊಪಿತರಾದ ನೀವು ಭಾರತೀಯ ದಂಡ ಸಂಹಿತೆ ಕಲಂ 457 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 18.09.2018

(ಶ್ರೀಕಂಠ ಎನ್.ಎ.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ

Phs